ಹಾಸ್ಟೆಲ್ ಕಟ್ಟಡ ಮುಚ್ಚಿರುವುದು
ಶ್ರೀ ರುದ್ರೇಶಗೌಡ ವೈ.ಎನ್ (ಬೇಲೂರು)
74 (103)

ಅ) ಬೇಲೂರು ತಾಲ್ಲೂಕಿನ ಚೀಕನಹಳ್ಳಿ ಗ್ರಾಮದಲ್ಲಿನ ಇಲಾಖೆಯ ಹಾಸ್ಟೆಲ್ ಕಟ್ಟಡ ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕಟ್ಟಡವನ್ನು ಚೀಕನಹಳ್ಳಿ ಗ್ರಾಮಕ್ಕೆ ಹೊಸದಾಗಿ ಮಂಜೂರಾಗಿರುವ ಆರೋಗ್ಯ ಇಲಾಖೆಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಂಜೂರು ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ;

ಇ) ಯಾವಾಗ ಈ ಕಟ್ಟಡವನ್ನು ಆರೋಗ್ಯ ಇಲಾಖೆಗೆ ಹಸ್ತಾಂತರಿಸಲಾಗುವುದು?

ಶ್ರೀ ಎ.ನಾರಾಯಣಸ್ವಾಮಿ (ಸಮಾಜ ಕಲ್ಯಾಣ, ಬಂಧಿಖಾನೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಹೌದು

ಆ) <u>ಸಮಾಜ ಕಲ್ಯಾಣ ಇಲಾಖೆ:-</u> ಸರ್ಕಾರದ ನಿರ್ದೇಶನದ ಮೇರೆಗೆ ಸದರಿ ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನಡೆಸಲು ಆರೋಗ್ಯ ಇಲಾಖೆಗೆ ವರ್ಗಾಯಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ. ಅವರ ಹಂತದಲ್ಲಿಯೇ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು. ಹಾಸನ ಜಿಲ್ಲೆರವರಿಗೆ ತಿಳಿಸಲಾಗಿರುತ್ತದೆ.

ಇ) ಈ ಸಂಬಂಧವಾಗಿ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆರವರು ಕ್ರಮ ವಹಿಸಬೇಕಾಗಿರುತ್ತದೆ.

ಧಾನ್ಯಗಳನ್ನು ಪಡಿತರ ಚೀಟಿ ಮೂಲಕ ವಿತರಣೆ
ಶ್ರೀ ಖಾದರ್ ಯು.ಟಿ.(ಮಂಗಳೂರು)
71 : (179)

ಅ) ರಾಜ್ಯದಲ್ಲಿ ಪಡಿತರ ಚೀಟಿ ಮೂಲಕ ಆಹಾರ ಧಾನ್ಯಗಳನ್ನು ಎಷ್ಟು ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಿಸಲಾಗುತ್ತಿದೆ;

ಆ) ಪ್ರತಿ ನ್ಯಾಯಬೆಲೆ ಅಂಗಡಿ ಮೂಲಕ ಎಷ್ಟು ಪಡಿತರ ಚೀಟಿಗಳಿಗೆ ಆಹಾರ ವಿತರಣೆಯಾಗುತ್ತಿದೆ:

ಇ) ರಾಜ್ಯದಲ್ಲಿ ಇದುವರೆವಿಗೂ ಎಷ್ಟು ಜನ ಫಲಾನುಭವಿಗಳಿಗೆ ಪಡಿತರ ಚೀಟಿಯನ್ನು ವಿತರಿಸಿ, ಆಹಾರ ಧಾನ್ಯಗಳನ್ನು ನೀಡಲಾಗುತ್ತಿದೆ?

ಶ್ರೀ ಡಿ.ಎನ್.ಜೀವರಾಜ್(ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಪಡಿತರ ಚೀಟಿ ಮೂಲಕ ಪ್ರಸ್ತುತ 20,452 ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ.

ಆ) ಪ್ರತಿ ನ್ಯಾಯಬೆಲೆ ಅಂಗಡಿ ಮೂಲಕ ಸರಾಸರಿ 663 ಪಡಿತರ ಚೀಟಿಗಳಿಗೆ ಆಹಾರ ವಿತರಣೆ ಯಾಗುತ್ತಿದೆ.

ಇ) ಪ್ರಸ್ತುತ ರಾಜ್ಯಾದ್ಯಂತ ಇದುವರೆವಿಗೆ ವಿತರಿಸಲಾಗಿರುವ ಮತ್ತು ಆಹಾರ ಧಾನ್ಯಗಳನ್ನು ನೀಡಲಾಗುತ್ತಿರುವ ಪಡಿತರ ಚೀಟಿಗಳ ವಿವರ ಈ ಕೆಳಗಿನಂತಿರುತ್ತದೆ.(ದಿನಾಂಕ:1-2-13ರ ಅಂತ್ಯಕ್ಕೆ)

AAY	**11,03,325**
BPL	**88,00,838**
APL	**36,47,112**
ಒಟ್ಟು	**1,35,51,275**

ಕುಣಬಿ ಜನಾಂಗ

ಶ್ರೀ ಸುನೀಲ್.ವಿ.ಹೆಗಡೆ(ಹಳಿಯಾಳ)

(187) 109

ಅ) ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿರುವ ಕುಣಬಿ ಜನಾಂಗ ಮತ್ತು ಬುಡಕಟ್ಟು ಜನಾಂಗವನ್ನು ಗೋವಾ ರಾಜ್ಯದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿಸಿದ್ದು ರಾಜ್ಯ ಸರ್ಕಾರವು ಈ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗುವುದೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು? (ಪೂರ್ಣ ಮಾಹಿತಿ ನೀಡುವುದು)